ನಿಮ್ಮೊಡನೆ

# ಷೋ ಮತ್ತು ರಿಯಾಲಿಟಿ

ಕನ್ನಡ ಟಿವಿ ರಿಯಾಲಿಟಿ ಷೋ ಸ್ಪರ್ಧಿಗಳ ಆತ್ಮಹತ್ಯೆ ಯತ್ನ ಇದೇ 'ಪ್ರಥಮ' ಅಲ್ಲ. ಈ ಹಿಂದೆ 'ಹಳ್ಳಿ ಹೈದ ಪ್ಯಾಟೆಗೆ ಬಂದ' ಎನ್ನುವ ರಿಯಾಲಿಟಿ ಷೋ ಗೆದ್ದಿದ್ದ ರಾಜೇಶ್ ಎಂಬ ಆದಿವಾಸಿ ಹುಡುಗ ಆತ್ಮಹತ್ಯೆ ಮಾಡಿಕೊಂಡಿದ್ದ. 'ಸಾರೆಗಮಪ'ದ ಯುವ ಹಾಡುಗಾರನೊಬ್ಬ ಖಿನ್ನತೆಯಿಂದ ಪ್ರಾಣ ಕಳೆದುಕೊಂಡಿದ್ದ.

'ಬಿಗ್‌ಬಾಸ್' ಎಂಬ ಟಿ.ವಿ ರಿಯಾಲಿಟಿ ಷೋ ನಲ್ಲಿ ವಿಜೇತನಾಗಿ ಭಾರೀ ಮೊತ್ತದ ಬಹುಮಾನ ಗೆದ್ದ ಪ್ರಥಮ್ ಎಂಬ ಹುಡುಗ ನಿದ್ರೆಮಾತ್ರೆಗಳನ್ನು ನುಂಗಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದು ಕಳೆದ ವಾರ ಟಿ.ವಿ ವಾಹಿನಿಗಳಿಗೆ ಬಲುದೊಡ್ಡ ಸುದ್ದಿ. ಈ ಆತ್ಮಹತ್ಯೆಯ ಪ್ರಯತ್ನವನ್ನು ಪ್ರಥಮ್, ಫೇಸ್‌ಬುಕ್ ಎಂಬ ಜಾಲತಾಣದಲ್ಲಿ 'ಲೈವ್' ಆಗಿ ನಡೆಸಿದ್ದು ದೊಡ್ಡ ಚರ್ಚೆಗೂ ಕಾರಣವಾಯಿತು. ಬಹುತೇಕ ಟಿ.ವಿ ವಾಹಿನಿಗಳಲ್ಲಿ ಈ ಘಟನೆಯ ಕುರಿತು ಪರ– ವಿರುದ್ಧ ವಾದಗಳು ಕೇಳಿಬಂದವು. ತನ್ನ ಸ್ನೇಹಿತನೊಬ್ಬ ವಿಪರೀತ ಕಿರುಕುಳ ಕೊಡುತ್ತಿರುವುದರಿಂದ ರೋಸಿಹೋಗಿ ಈ ಆತ್ಮಹತ್ಯೆ ಯತ್ನ ನಡೆಸಿದೆ ಎಂದು ಸ್ವತಃ ಪ್ರಥಮ್ ಹೇಳಿಕೆ ನೀಡಿದ. ಆತನಿಗೆ ಚಿಕಿತ್ಸೆ ನೀಡಿದ ವೈದ್ಯರೊಬ್ಬರ ಪ್ರಕಾರ, 'ಪ್ರಧಾನಿ ನರೇಂದ್ರ ಮೋದಿ ಮತ್ತು ಮಾದಕ ಚಿತ್ರನಟಿ ಸನ್ನಿ ಲಿಯೊನ್ ಭೇಟಿ ಸಾಧ್ಯವಾಗದೆ ಪ್ರಥಮ್ ಹತಾಶನಾಗಿದ್ದ'ನಂತೆ! 'ಬಿಗ್‌ಬಾಸ್' ಕಾರ್ಯಕ್ರಮದ ಉದ್ದಕ್ಕೂ ಕೂಗಾಟ, ಅರಚಾಟ, ಉದ್ಧಟತನ, ಅತಿಬುದ್ಧಿವಂತಿಕೆ, ವಾಚಾಳಿತನ, ಜಗಳ, ನಯ– ವಿನಯ ಎಲ್ಲವನ್ನೂ ಪ್ರದರ್ಶಿಸಿದ್ದ ಪ್ರಥಮ್ ಈ ಕಾರಣಕ್ಕಾಗಿಯೇ ಸಾವಿರಾರು ಅಭಿಮಾನಿಗಳನ್ನೂ ಸಂಪಾದಿಸಿದ್ದ. ಆದರೆ ಸ್ವಸ್ಥಚಿತ್ತದಿಂದ ಕುಳಿತು 'ಬಿಗ್‌ಬಾಸ್' ಕಾರ್ಯಕ್ರಮ ನೋಡುತ್ತಿದ್ದ ಎಷ್ಟೋ ಪ್ರಾಜ್ಞರಿಗೆ ಈತನ ವರ್ತನೆ ಗಮನ ಸೆಳೆಯಲು ಮಾಡುವ ನಾಟಕೀಯ ಹುಚ್ಚಾಟದಂತೆ ಕಾಣಿಸಿದ್ದೂ ಸುಳ್ಳಲ್ಲ. 'ಬಿಗ್‌ಬಾಸ್' ನಲ್ಲಿ ಈತನಿಗಿಂತ ಹೆಚ್ಚು ಜಾಣ್ಮೆ ಮತ್ತು ಸಹನೆಯಿಂದ ವರ್ತಿಸಿದ ಕೆಲವು ಸ್ಪರ್ಧಿಗಳನ್ನು ಬಿಟ್ಟು ಈತನಿಗೇ ಮೊದಲ ಬಹುಮಾನ ಕೊಟ್ಟಿದ್ದರ ಬಗ್ಗೆಯೂ ಆಗ ಅಪಸ್ವರಗಳು ಎದ್ದಿದ್ದವು. ಇದಕ್ಕೂ ಹಿಂದಿನ 'ಬಿಗ್‌ಬಾಸ್' ಸ್ಪರ್ಧೆಯಲ್ಲಿ ಕನ್ನಡ ಬೆಳ್ಳಿತೆರೆಯ ಅತ್ಯುತ್ತಮ ನಟರಲ್ಲಿ ಒಬ್ಬರಾದ ಅರುಣ್ ಸಾಗರ್ ಕೂಡಾ ಹೀಗೆಯೇ ಪ್ರಶಸ್ತಿಯ ಅಂತಿಮ ಹಂತದಲ್ಲಿ ಪರಾಭವಗೊಂಡದ್ದು ತೀವ್ರ ಚರ್ಚೆಗೆ ಆಸ್ಪದ ನೀಡಿತ್ತು. ಅದೇನಿದ್ದರೂ ಆಯಾ ಸ್ಪರ್ಧೆಯ ತೀರ್ಪುಗಾರರ ವಿವೇಚನೆಗೆ ಬಿಟ್ಟ ವಿಷಯ. ಅವರ ತೀರ್ಪಿಗೆ ಅವರದ್ದೇ ಆದ ಸಮರ್ಥನೆಗಳಿರುತ್ತವೆ. ಇಲ್ಲಿ ವಿಷಯ ಅದಲ್ಲ. ಟೀವಿ ರಿಯಾಲಿಟಿ ಷೋನಲ್ಲಿ ಪ್ರಶಸ್ತಿ ಗೆದ್ದು ಸಾರ್ವಜನಿಕ ಜೀವನದಲ್ಲಿ ದೊಡ್ಡದೊಂದು ಸ್ಥಾನ ಪಡೆಯುವ, ಈಗಿನ ನೂರಾರು ತರುಣರಿಗೆ ಆದರ್ಶ ಎನ್ನಿಸಿಕೊಳ್ಳುವ  ಸ್ಪರ್ಧಿಯೊಬ್ಬ ಹೀಗೆ ಆತ್ಮಹತ್ಯೆಯಂತಹ ದುರ್ಬಲ ನಿರ್ಧಾರಗಳನ್ನು ಕೈಗೊಂಡರೆ ಅದು ಸಮಾಜದ ಮೇಲೆ ಬೀರುವ ಪರಿಣಾಮಗಳೇನು? ಅದರಲ್ಲೂ ಸಾಮಾಜಿಕ ಜಾಲತಾಣದಲ್ಲಿ ಆತ್ಮಹತ್ಯೆಯನ್ನು 'ಲೈವ್' ಆಗಿ ತೋರಿಸುವ ಕುತ್ಸಿತ ಮನಸ್ಥಿತಿಗೆ ಏನನ್ನಬೇಕು? ಟಿ.ವಿಗಳಲ್ಲಿ, ಸಿನಿಮಾಗಳಲ್ಲಿ 'ಸ್ಟಾರ್'ಗಳು ಎನ್ನಿಸಿಕೊಂಡು ಸಮಾಜಕ್ಕೆ 'ರೋಲ್‌ಮಾಡೆಲ್' ಎನ್ನಿಸಿಕೊಳ್ಳುವ ವ್ಯಕ್ತಿಗಳು ಹೀಗೆ ತಮ್ಮದು ಕಳಪೆ ವ್ಯಕ್ತಿತ್ವ ಎಂದು ಬಹಿರಂಗವಾಗಿ ಪ್ರದರ್ಶಿಸುವುದರ ಹಿಂದಿನ ನೈತಿಕ ಅಧಃಪತನ ಎಂಥಹದ್ದು?

ಕನ್ನಡದ ಟಿ.ವಿ ರಿಯಾಲಿಟಿ ಷೋಗಳಿಗೆ ಸಂಬಂಧಿಸಿ ಇಂತಹ ಘಟನೆ ನಡೆದದ್ದು ಇದೇ ಮೊದಲಲ್ಲ. ಈ ಹಿಂದೆ 'ಹಳ್ಳಿ ಹೈದ ಪ್ಯಾಟೆಗೆ ಬಂದ' ಎನ್ನುವ ರಿಯಾಲಿಟಿ ಷೋ ಒಂದರಲ್ಲಿ ಹೀಗೆಯೇ ದೊಡ್ಡ ಮೊತ್ತದ ಬಹುಮಾನ ಗೆದ್ದಿದ್ದ ರಾಜೇಶ್ ಎಂಬ ಆದಿವಾಸಿ ಹಾಡಿಯ ಹುಡುಗನೂ ಮನೆಯ ಮಹಡಿಯಿಂದ ಕೆಳಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದ. 'ಸಾರೆಗಮಪ' ಕಾರ್ಯಕ್ರಮದಲ್ಲಿ ಅತ್ಯುತ್ತಮವಾಗಿ ಹಾಡುತ್ತಿದ್ದ ಆದಿತ್ಯ ಎನ್ನುವ ಹುಡುಗನೊಬ್ಬ ಮುಂದಿನ ಸ್ಪರ್ಧೆಗೆ ಮುಂಬೈಗೆ ಹೋಗಲಾಗದೆ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡಿದ್ದ. ಆಗೆಲ್ಲಾ ರಿಯಾಲಿಟಿ ಷೋಗಳು ಯುವಮನಸ್ಸಿನ ಮೇಲೆ ಬೀರುವ ದುಷ್ಪರಿಣಾಮಗಳ ಬಗ್ಗೆ ಸಾಕಷ್ಟು ಚರ್ಚೆ ನಡೆದಿತ್ತು. ತೀರಾ ಇತ್ತೀಚೆಗೆ ಟಿ.ವಿಯಲ್ಲಿ ಹಾಡಿದ ಸುಹಾನಾ ಎಂಬ ಗಾಯಕಿಯ ಧರ್ಮ, ಮಾತು ಮತ್ತು ಉಡುಪುಗಳೇ ದೊಡ್ಡ ಸಂಗತಿಯಾಗಿ, ಅದರ ಬಗ್ಗೆಯೇ ಪರ– ವಿರುದ್ಧ ವಾಗ್ಯುದ್ಧಗಳು ನಡೆದವು. ಆಕೆಯ ಗಾಯನ ಸಾಮರ್ಥ್ಯದ ಕುರಿತ ಮಾತುಗಳು ಹಿನ್ನೆಲೆಗೆ ಸರಿದವು. ಒಟ್ಟಾರೆಯಾಗಿ ಟಿ.ವಿ ವಾಹಿನಿಗಳಿಗೆ ಪುಕ್ಕಟೆ ಪ್ರಚಾರ ಸಿಕ್ಕು, ಟಿಆರ್‌ಪಿ ಏರಿಕೆಯಾಗಿ ಜಾಹೀರಾತು ಆದಾಯ ಹೆಚ್ಚಿತೇ ಹೊರತು ಈ ವಾಗ್ವಾದಗಳಿಂದ ಸಮಾಜಕ್ಕೆ ಯಾವುದೇ ಪ್ರಯೋಜನವಾಗಲಿಲ್ಲ; ಭಾಗವಹಿಸುವ ಸ್ಪರ್ಧಿಗಳಿಗಾಗಲೀ, ಈ ಕಾರ್ಯಕ್ರಮಗಳನ್ನು ತಪ್ಪದೇ ನೋಡುವ ವೀಕ್ಷಕರಿಗಾಗಲೀ ಗುಣಾತ್ಮಕವಾದ ಲಾಭವಾಗದಿದ್ದರೆ ಅಂತಹ ಕಾರ್ಯಕ್ರಮಗಳಿಗೆ ಯಾವ ಅರ್ಥವೂ ಇರುವುದಿಲ್ಲ.

ಪ್ರಥಮ್ ಮೇಲೆ ಈಗಾಗಲೆ ಆತ್ಮಹತ್ಯೆ ಯತ್ನಕ್ಕೆ ಸಂಬಂಧಿಸಿ ಮೊಕದ್ದಮೆ ದಾಖಲಾಗಿದೆ. ಈ ನಿಟ್ಟಿನಲ್ಲಿ ಕಾನೂನು ತನ್ನ  ದಾರಿಯನ್ನು ನೋಡಿಕೊಳ್ಳುತ್ತದೆ. ಆದರೆ ಟಿ.ವಿ ವಾಹಿನಿಗಳು ಹೀಗೆ ಸಮಾಜದಲ್ಲಿ ಅಶಾಂತಿಯ ಅಲೆ ಎಬ್ಬಿಸುವ, ಯುವಜನರನ್ನು ಉದ್ರೇಕಿಸಿ ದಾರಿ ತಪ್ಪಿಸುವ ಪ್ರವೃತ್ತಿಗೆ ಕೊನೆ ಹಾಡುವುದು ಹೇಗೆ? ಆರೋಗ್ಯಕರ ಸಮಾಜ ನಿರ್ಮಾಣದ ಆಶಯವುಳ್ಳ ಕಾರ್ಯಕ್ರಮಗಳೆಲ್ಲ ಬಿಟ್ಟಿ ಪ್ರಚಾರ, ಜಾಹೀರಾತು ಆದಾಯ ಮತ್ತು ಟಿಆರ್‌ಪಿ ಪೈಪೋಟಿಯ ಬೆನ್ನ ಹತ್ತುವುದು ಎಷ್ಟು ಸರಿ?

■ ಬಿ.ಎಂ.ಹನೀಫ್

